ಅಲ್ಲಿಗೆ ಹೋಗಿ ಸರ್ಕಾರದ ನಿಲುವು ಏನು? ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಸ್ಪಷ್ಟಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ : ಸದನದ ಕಲಾಪಗಳು ಮುಗಿದ ಮೇಲೆ ಸಂಬಂಧಪಟ್ಟ ಮಂತ್ರಿಗಳನ್ನು ಅಲ್ಲಿಗೆ ಕಳುಹಿಸಿಕೊಡುತ್ತೇನೆ.

ಎ) : ಚಾಮರಾಜ ನಗರಕ್ಕೆ ಕುಡಿಯುವ ನೀರಿನ ಸೌಲಭ್ಯ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಮತ್ತು ರಾಮಸಮುದ್ರ ಪಟ್ಟಣಗಳಲ್ಲಿ.....

ಅಧ್ಯಕ್ಷರು : ನಮ್ಮದು ನಿಮ್ಮದು ಎಲ್ಲಾ ಗಡೀನೆ.

ಶ್ರೀ ವಾಟಾಳ್ ನಾಗರಾಜ್ : ಹೌದು ನಮ್ಮದು ನಿಮ್ಮದು ಎಲ್ಲಾ ಸೇರಿ ಗಡಿ ಪ್ರದೇಶಗಳಿಗೆ ಚಾಮರಾಜನಗರ ಮತ್ತು ಶಿವಮೊಗ್ಗ, ಮೈಸೂರು ಇಲ್ಲಿಗೆಲ್ಲಾ ಮುಖ್ಯಮಂತ್ರಿಗಳು ಎರಡು ಸಲ ಅಲ್ಲ ಮೂರು ಸಲ ತಾವು ಸಭೆಯನ್ನು ಕರೆದಿರಿ ಮತ್ತು ಅದು ಸಚಿವ ಸಂಪುಟ ಸಭೆಗೆ ಬರುತ್ತಲೂ ಬಹಳ ಬೇಗ ಮುಗಿಸೋಣ ಎಂದು ತಾವು ಹೇಳಿ ಈಗಾಗಲೇ 6 ವರ್ಷಗಳಾಗಿದೆ. ಆದ್ದರಿಂದ ದಯಮಾಡಿ ತಾವು ಬಹಳ ಬೇಗ ಏಕೆಂದರೆ ಶ್ರೀ ವಿರೇಂದ್ರ ಪಾಟೀಲ್‌ರವರ ಕಾಲದಲ್ಲಿ ಅದು ಉದ್ಘಾಟನೆಯಾಗಿದ್ದು ತಮ್ಮ ಕಾಲದಲ್ಲಾದರೂ ನೀರು ಕೊಡುವಂತಹ ವ್ಯವಸ್ಥೆ ಆಗಲಿ ಎನ್ನುವಂತಹದ್ದು ನನ್ನ ಆಸೆ.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಸದಸ್ಯರು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನೂ ಕರೆಯಿಸಿ ಅಲ್ಲಿ ಕಂಟ್ರಾಕ್ಟರ್ಸ್ ಕೆಲವರು ಕಾಸ್ಟ್ ಎಸ್ಕಲೇಷನ್ ಕೇಳಿದ್ದರು, ಅದನ್ನ ಪರ್‌ಮಿಟ್ ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದ್ದೇವು, ಆದರೆ ಈಗ ಕೆಲಸ ತ್ವರಿತಗತಿಯಿಂದ ನಡೆಯಲೆಂದು ಕಾಸ್ಟ್ ಎಸ್ಕಲೇಷನ್‌ನ ಕಂಡಿಷನಗೆ ಒಪ್ಪಿದ್ದೆವೆ. ನಾವು ಹಣ ಕೊಡುತ್ತಾ ಇದ್ದೇವೆ, ಆದರೆ ಚಾಮರಾಜನಗರ ಕೆಲಸ ಇನ್ನೂ ಬಹಳ ಇದೆ. ಚಾಮರಾಜನಗರ, ಶಿವಮೊಗ್ಗ ಎರಡೂ ಒಟ್ಟಿಗೆ ತೆಗೆದುಕೊಂಡಿದ್ದು, ಅದಕ್ಕೆ ಈಗ ಎಷ್ಟಾಗಿದೆ ಕಾಸ್ಟ್ ಎಸ್ಕಲೇಷನ್, ಇವರ ವರ್ಕ್ಸ್‌ನಲ್ಲಿ ಎಷ್ಟು ಬೇಕಾಗಿದೆ ಎನ್ನುವುದರ ಲೆಕ್ಕ ಇನ್ನೂ ತಿಳಿದಿಲ್ಲ. ತಿಳಿದ ಮೇಲೆ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾತುಕತೆಯಾಗಿದೆ. ಮಾತುಕತೆ ಆಗಿ ಅದು ಸಚಿವ ಸಂಪುಟದ ಸಭೆಗೆ ಬರಬೇಕು ಅಷ್ಟೇ. ತಾವು ತಾತ್ವಿಕವಾಗಿ ಒಪ್ಪಿದ್ದೀರಿ. ಈಗ ನಾನು ಹೇಳುವುದೇನೆಂದರೆ, ಈಗಾಗಲೇ ಆರು ವರ್ಷಗಳಾಗಿದೆ, ನಿಧಾನವಾಗುತ್ತಿದೆ. ಆದರೆ ಲೆಕ್ಕಾಚಾರವಾಗಿ ಇದು ಇಷ್ಟೊತ್ತಿಗೆ ಮುಗಿಯಬೇಕಿತ್ತು. ಆದ್ದರಿಂದ ಅದಕ್ಕೆ ತಾವು ಸ್ವಲ್ಪ ಮನಸ್ಸು ಮಾಡಿದರೆ ನನ್ನ ದೃಷ್ಟಿಯಿಂದ ಬೇಗ ಮುಗಿಯುತ್ತದೆ. ಚುನಾವಣೆ ಬರುವುದು ಇನ್ನೂ ಎರಡು ಎರಡೂವರೆ ವರ್ಷ ಇದೆ. ಅಷ್ಟರೊಳಗಾದರೂ ಇದು ಬೇಗ ಬಂದರೆ ಬಹಳ ಅನುಕೂಲವಾಗುತ್ತದೆ.

ಅಧ್ಯಕ್ಷರು : ಅರ್ಥ ಆಯಿತಲ್ಲ? ಚುನಾವಣೆ ಬರುವುದು ಇನ್ನೂ ಎರಡೂವರೆ ವರ್ಷ ಆಗುತ್ತದೆ. ಅಷ್ಟರೊಳಗೆ ಬಂದರೆ ಅವರಿಗೆ ಅಂದರೆ ಜನರಿಗೆ ನೀರು ಕುಡಿಸಬೇಕು.

ಶ್ರೀ ಜೆ. ಹೆಚ್. ಪಟೇಲ್ : ಚುನಾವಣೆ ಬರುವುದರೊಳಗಾಗಿ ಅವರಿಗೆ ನೀರು ಕುಡಿಸಬೇಕು ಎಂದು ನಾನು ಹೇಳಿದ್ದೇನೆ. ನೀರು ಕುಡಿಸುತ್ತೇನೆ.

(ನಗು)

ಅಧ್ಯಕ್ಷರು : ಇನ್ನೊಂದು ಅವಧಿಗೆ ಆರಿಸಿ ಬರುವುದಕ್ಕೆ ಎಲ್ಲಾ ವ್ಯವಸ್ಥೆ ಅವರು ಮಾಡಿಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದೇನೆಂದರೆ, ಯಾವುದೇ ಒಂದು ಯೋಜನೆಗಳು ಚಾಮರಾಜ ನಗರದಲ್ಲಿ ತೆಗೆದುಕೊಂಡರೆ ಮುಖ್ಯ ಮಂತ್ರಿಗಳು ಅಲ್ಲಿಗೆ ಹೋಗಬಾರದು ಎನ್ನತಕ್ಕಂತಹದ್ದು ಇದೆ ಎಂದು ನಾನು ಕೇಳಿದ್ದೇನೆ. ಅದು ಯಾವುದೇ ಆಗಲಿ ಇನ್ಯಾಗುರೇಷನ್ ಆಗಲಿ, ಫೌಂಡೇಶನ್ ಆಗಲಿ ಹೋಗಬಾರದು ಎಂದು ಹೇಳುತ್ತಾರೆ. ಹಿಂದಿನಿಂದಲೂ ಅದು ನಡೆದುಕೊಂಡು ಬಂದಿದೆ ಅಷ್ಟೇ. ಏಕೆಂದರೆ, ಯಾರನ್ನು ಕರೆದುಕೊಂಡು ಹೋಗುತ್ತಾರೆ ತಿರುಗ ಅವರು ಬರುವುದಿಲ್ಲ ಎನ್ನತಕ್ಕಂತಹದ್ದು ಈ ಸದನದಲ್ಲಿ ಚರ್ಚೆ ಆಯಿತು. ಅದಕ್ಕಾಗಿ ಮತ್ತೇನಾದರೂ ಬೇಗನೆ ತಯಾರು ಮಾಡಿ ನೀವು ಹೋದಿರಿ ಅಂದರೆ ಮತ್ತೆ.....

ಶ್ರೀ ವಾಟಾಳ್ ನಾಗರಾಜ್ : ಇಲ್ಲಾ ಇಲ್ಲಾ. ಪಟೇಲರು ಬಂದರೆ ಅವು ಯಾವ ಯಾವುವು ಇವೆ ಅವೆಲ್ಲಾ ಹೊರಟುಹೋಗುತ್ತವೆ. ಅವರು ಅಲ್ಲಿಗೆ ಬಂದರೆ ಇನ್ನೊಂದು ಸಲ ಮುಖ್ಯಮಂತ್ರಿಯಾಗಿ ಬಿಡುತ್ತಾರೆ. ಅದು ಸತ್ಯ. ಆದ್ದರಿಂದ ತಮಗೆ ಹೇಳುತ್ತಾ ಇದ್ದೇನೆ.....

ಶ್ರೀ ಜೆ. ಹೆಚ್. ಪಟೇಲ್ : ಅಲ್ಲಿಗೆ ಹೋಗಬಾರದು ಎಂದು ಹೇಳಿದ್ದರು. ಆದರೆ ನಾನು ಅಲ್ಲಿಗೆ ಹೋಗಿ ಬಂದೆ. ಹೋಗಿ ಬಂದ ಮೇಲೆ ನನಗೆ ಪ್ರಮೋಷನ್ನೂ ಆಯಿತು.

ಶ್ರೀ ವಾಟಾಳ್ ನಾಗರಾಜ್ : ಈ ಪದ್ಧತಿ ತಪ್ಪಿಸುವುದಕ್ಕೋಸ್ಕರ ತಾವು ನಮ್ಮ ಕ್ಷೇತ್ರಕ್ಕೆ ಬರಬೇಕು. ಕಾವೇರಿ ಕುಡಿಯುವ ನೀರಿನ ಯೋಜನೆಯ ಉದ್ಘಾಟನೆಯನ್ನು ತಾವೇ ಮಾಡಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಏನೇ ಕಷ್ಟವಾದರೂ ಅದನ್ನ ತಾವು ಮಾಡಿಕೊಡಬೇಕು.

ಶ್ರೀ ಜೆ. ಹೆಚ್. ಪಟೇಲ್ : ಆಯಿತು ಅಧ್ಯಕ್ಷರೆ, ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು : ಅವರು ಮಿತಭಾಷಿ ಒಪ್ಪಿಕೊಂಡು ಬಿಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅಲ್ಲ, ನಮಗೆ ನೀರು ಕುಡಿಸುವುದು ಏನಾಗಿದೆ ಅಂದರೆ ಅವರಲ್ಲಿ ಆ ಭಾವನೆ ಇಲ್ಲ ಪಾಪ. ಏನಾಗಿದೆ ಎಂದರೆ ಕೆಲವರದು ಪಿತೂರಿ ಇದೆ. ಅವರಲ್ಲಿ ಆ ಭಾವನೆ ಇಲ್ಲವೇ ಇಲ್ಲ. ಅವರು ಯಾರ ಬಗ್ಗೆಯೂ ಪೂರ್ವಾಗ್ರಹಪೀಡಿತರಾಗುವ ಪ್ರಶ್ನೆ ಇಲ್ಲವೇ ಇಲ್ಲ. ಅದಂತೂ ಬಹಳ ಖುಷಿ ಆಗತಕ್ಕಂಥದ್ದು. ಇನ್ನೂ ಎರಡು ವರ್ಷ ಇದೆ, ತಾವು ಸ್ವಲ್ಪ ಸಹಕಾರ ಮಾಡಿ, ನಾವು ಎಲ್ಲಾ ಇಲ್ಲಿಗೆ ಬರಬೇಕೋ ಬೇಡವೋ ತಾವು ಹೇಳಿ ಬೀಡಿ.

ಅಧ್ಯಕ್ಷರು : ಮಾನ್ಯ ಖರ್ಗೆಯವರೆ, ತಾವು ತೊಗರಿ ಬೇಳೆ ವಿಷಯವಾಗಿ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ...

ಅಧ್ಯಕ್ಷರು : ನೀವು ಪುನಃ ಇಲ್ಲಿಗೆ ಬರಬೇಕು.

ಅಧ್ಯಕ್ಷರು : ಹೌದು ಸಾರ್. ತಾವೂ ಇರಬೇಕು. ನಾನು ಇರಬೇಕು, ಮುಖ್ಯಮಂತ್ರಿಗಳು ಇರಬೇಕು ಸಾರ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟವಾಗಿ ನಾನು ನಿಮಗೆ ನೀರು ಕುಡಿಸೇ ಬಿಡುತ್ತೇನೆ ಎಂದು ಹೇಳಿದರು. ಅಂದರೆ ಏನು ಅರ್ಥ? ನೀವು ಬೇಗ ಬೇಗನೆ ಅಂದರೆ ಮುಂದಿನ ಚುನಾವಣೆಯೊಳಗೆ ಮಾಡಿ ಎಂದು ಹೇಳಿದಿರಿ. ಅದಕ್ಕೆ ಅವರು ನೀರು ಕುಡಿಸೇ ಬಿಡುತ್ತೇವೆ ನೋಡುತ್ತಿರಿ ಎಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್ : ನೀರು ಕುಡಿಸುತ್ತೇವೆ ಎಂದು ಹೇಳಿದುದರ ಅರ್ಥ ಏನೆಂದರೆ ನಮ್ಮ ಊರು, ತಾಲ್ಲೂಕಿನ ಜನರಿಗೆಲ್ಲಾ ನೀರು ಕೊಡುತ್ತೇವೆಂದು ಅರ್ಥ

ಶ್ರೀ ಜೆ. ಹೆಚ್. ಪಟೇಲ್ : ನೀರು ಕುಡಿಸುವುದು ಎಂದರೆ ಒಂದು ಅರ್ಥ ನೀರು ಬಿಡುವುದು ಒಂದು ಅರ್ಥ. ನಿಮಗೆ ನೀರು ಬಿಡುತ್ತೇವೆ. ಅವರಿಗೆ ನೀರು ಕುಡಿಸುತ್ತೇವೆ.

(ನಗು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮಗೆ ನೀರು ಬಿಡುತ್ತೇವೆ ಅವರಿಗೆ ನೀರು ಕುಡಿಸುತ್ತೇವೆ ಎಂದರು. ನೋಡಿ ಇಲ್ಲೇ ಬದಲಾವಣೆ ಮಾಡಿದರು. ಆದರೂ ಕೂಡ ನೀವು ನೀರು ಎಷ್ಟೇ ಬಿಟ್ಟರೂ ಕೂಡ ಆ ನೀರಿನಲ್ಲಿ ಹರಿದುಕೊಂಡು ಹೋಗತಕ್ಕಂಥ, ಅದರಲ್ಲಿ ಈಜುವಂತಹ ಶಕ್ತಿ ನಮಗೆ ಇದೆ. ನಾವು ಈಜಾಡಿಯೇ ಬರುತ್ತೇವೆ.

ಶ್ರೀ ಕುಂಬ್ಳೆ ಸುಂದರರಾವ್ : ನಮ್ಮಲ್ಲಿ ನೀರು ಬಿಡುವಾಗ ರಾಮ ರಾಮ ಎಂದು ಹೇಳುವ ಕೆಲಸ ಉಂಟು. ಅವರು ಇವರಿಗೆ ನೀರು ಬಿಡುತ್ತಾರೆ ಎಂದು ಹೇಳಿದರೆ ನಾವು ರಾಮ ರಾಮ ಎಂದು ಹೇಳಿ ಕಳುಹಿಸುತ್ತೇವೆ.

ಏ) : ಗುಲ್ಬರ್ಗಾ ವಿಭಾಗದ ತೊಗರಿ ಬೇಳೆ ಧಾರಣೆಯಲ್ಲಿ ಕುಸಿತ

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಗುಲ್ಬರ್ಗ ವಿಭಾಗದಲ್ಲಿ ತೊಗರಿ ಬೇಳೆ ಪ್ರೈಸ್ ಕ್ವಿಂಟಾಲಿಗೆ ಇವತ್ತಿನ ರೇಟಿನ ಪ್ರಕಾರ ಸುಮಾರು 1,350 ರಿಂದ 1,550 ರೂಪಾಯಿವರೆಗೂ ಬಂದಿದೆ. ಆ ಭಾಗದಲ್ಲಿ ಸುಮಾರು ನಾಲ್ಕು ಲಕ್ಷ ಹೆಕ್ಟೇರಿನಲ್ಲಿ ಸುಮಾರು ಐದು ಲಕ್ಷ ಟನ್ ತೊಗರಿ ಬೇಳೆ ಬೆಳೆಯುತ್ತಾರೆ. ಆದರಲ್ಲೂ ವಿಶೇಷವಾಗಿ ಗುಲ್ಬರ್ಗದಲ್ಲಿ ಸುಮಾರು ಎರಡು ಲಕ್ಷ 21 ಸಾವಿರ ಹೆಕ್ಟೇರಿನಲ್ಲಿ, ಬೀದರ್‌ನಲ್ಲಿ ಸುಮಾರು 51 ಸಾವಿರ ಹೆಕ್ಟೇರಿನಲ್ಲಿ ರಾಯಚೂರಿನಲ್ಲಿ 40 ಸಾವಿರ, ಬಿಜಾಪುರದಲ್ಲಿ 30 ಸಾವಿರ ಧಾರವಾಡದಲ್ಲಿ 27 ಸಾವಿರ, ಬಳ್ಳಾರಿಯಲ್ಲಿ 20 ಸಾವಿರ ಹೆಕ್ಟೇರಿನಲ್ಲಿ ತೊಗರಿಬೇಳೆ ಬೆಳೆಯುತ್ತಾರೆ. ಸುಮಾರು